ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)
ಜಿ.ಕೆ.ವಿ.ಕೆ., ಬೆಂಗಳೂರು-560065
* ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ *

ದಿನಾಂಕ: 26.09.2023

# ಬೆಂಗಳೂರು ನಗರ ಜಿಲ್ಲೆಗೆ ಸೀಮಿತವಾಗಿದೆ.

## ಕಳೆದ ಐದು ದಿನಗಳ ಹವಾಮಾನ ಸಾರಂಶ

| ನಿಯತಾಂಕಗಳು | 22.09.2023 | 23.09.2023 | 24.09.2023 | 25.09.2023 | 26.09.2023 |
|---|---|---|---|---|---|
| ಮಳೆ (ಮಿ ಮೀ) | 0 | 0 | 12.0 | 0.4 | 3.6 |
| ಗರಿಷ್ಠ ಉಷ್ಣಾಂಶ (ಡಿ.ಸೆ. ) | 29.2 | 29.4 | 30.0 | 30.2 | 28.4 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 20.0 | 21.2 | 21.2 | 21.0 | 19.2 |
| ಮೋಡ (ಪ್ರಮಾಣ) | 4 | 2 | 2 | 2 | 4 |
| ಆರ್ದ್ರತೆ 7.20 ಬೆ (ಶೇ) | 84 | 81 | 89 | 84 | 83 |
| ಆರ್ದ್ರತೆ 2.20 ಮ (ಶೇ) | 63 | 63 | 60 | 74 | -- |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 5.7 | 3.5 | 4.2 | 3.9 | 3.5 |
| ಗಾಳಿಯ ದಿಕ್ಕು (ಡಿಗ್ರಿ) | 230 | 230 | 230 | 230 | 90 |

## ಈ ವಾರದ ಹವಾಮಾನ ಮುನ್ಸೂಚನೆ (ಭಾರತೀಯ ಹವಾಮಾನ ಇಲಾಖೆ)

(ದಿನಾಂಕ 27-09-2023 ರಿಂದ 01-10-2023 ವರೆಗೆ)

| ನಿಯತಾಂಕಗಳು | 27.09.2023 | 28.09.2023 | 29.09.2023 | 30.09.2023 | 01.10.2023 |
|---|---|---|---|---|---|
| ಮಳೆ (ಮಿ ಮೀ) | 7 | 6 | 6 | 5 | 4 |
| ಗರಿಷ್ಠ ಉಷ್ಣಾಂಶ (ಡಿ.ಸೆ. ) | 29 | 29 | 28 | 28 | 28 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 21 | 20 | 21 | 20 | 20 |
| ಮೋಡ (ಪ್ರಮಾಣ) | 7 | 7 | 7 | 7 | 7 |
| ಆರ್ದ್ರತೆ 7.20 ಬೆ (ಶೇ) | 90 | 90 | 92 | 90 | 90 |
| ಆರ್ದ್ರತೆ 2.20 ಮ (ಶೇ) | 88 | 88 | 90 | 88 | 88 |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 6 | 7 | 8 | 9 | 9 |
| ಗಾಳಿಯ ದಿಕ್ಕು (ಡಿಗ್ರಿ) | 248 | 248 | 248 | 248 | 248 |

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮುಂದಿನ ನಾಲ್ಕೈದು ದಿನಗಳಲ್ಲಿ ಹಗುರದಿಂದ ಸಾದಾರಣ ಮಳೆಯಾಗುವ ಸಾಧ್ಯತೆ ಇದೆ. ದಿನದ ಗರಿಷ್ಠ ಉಷ್ಣಾಂಶ **28.0-29.0 $^{o}$C** ಮತ್ತು ಕನಿಷ್ಠ **20.0-21.0$^{o}$C** ಇರುವ ಸಾಧ್ಯತೆ ಇದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ **90-92** % ಇದ್ದು **88-90** % ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **6-9** ಕಿ.ಮೀ. ವೇಗದಲ್ಲಿ ಬೀಸುವ ಸ0ಭವವಿದೆ.

**"ಹಸ್ತಕ್ಕೆ ಹದ, ಚಿತ್ತಕ್ಕೆ ಮಳೆ !"**

- ಹಸ್ತ ನಕ್ಷತ್ರದ ಮಳೆಯ ಕಾಲವು ಸೆಪ್ಟೆಂಬರ್ ತಿಂಗಳ 27 ರಿಂದ ಅಕ್ಟೋಬರ್ 10 ರ ವರೆಗೆ ಇರುತ್ತದೆ. ಈ ನಕ್ಷತ್ರದ ಪೂರ್ವ ಒಣ ವಲಯದ ಸರಾಸರಿ ಮಳೆಯು 105.8 ಮಿ.ಮೀ. ವರೆಗೆ ಮಳೆಯಾಗುತ್ತದೆ.

## ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

| ಬೆಳೆಗಳು | ಬೆಳೆಯ ಹಂತ | ಕೃಷಿ ಸಲಹೆಗಳು |
|---|---|---|
| ಸಾಮಾನ್ಯ | | ➢ ಹಗುರ ಮಳೆಯ ಅವಕಾಶ ಇರುವುದರಿಂದ ಮುಂಗಾರು ಬಿತ್ತನೆಯನ್ನು ಭೂಮಿಯ ತೇವಾಂಶದ ಆಧಾರದಲ್ಲಿ ಮುಂದುವರಿಸಿ.<br>➢ ಮುಂಗಾರು ಬೆಳೆಗಳಿಗೆ ಅಂತರ ಬೇಸಾಯ ಮಾಡಿ, ಬುಡಕ್ಕೆ ಮಣ್ಣನ್ನು ಸೇರಿಸಿ ಇದರಿಂದ ತೇವಾಂಶ ಸಂರಕ್ಷ ಣೆಯಾಗುತ್ತದೆ.<br>➢ ಗೊಬ್ಬರದ ಗಿಡಗಳನ್ನು ಮತ್ತು ಕಳೆಗಿಡಗಳನ್ನು ಭೂ ಹೊದಿಕೆಯಾಗಿ ಬೆಳೆಗಳಿಕೆ ಹಾಕಿ ಇದರಿಂದ |

| | | |
|---|---|---|
| | | ಗೊಬ್ಬರ ಮತ್ತು ತೇವಾಂಶದ ಸಂರಕ್ಷಣೆಯಾಗುತ್ತದೆ.<br>➢ ಬಿತ್ತನೆಯಾಗಿರುವ ರಾಗಿಯಲ್ಲಿ ಖಾಲಿ ಇರುವ ಜಾಗಗಳಲ್ಲಿ ರಾಗಿ ಗಿಡಗಳನ್ನು ನಾಟಿ ಮಾಡಿ ಇದರಿಂದ ಗಿಡಗಳ ಸಂಖ್ಯೆಯನ್ನು ಕಾಪಾಡಿಕೊಳ್ಳಬಹುದು ಹಾಗು ತೆಂಡೆ ಹೊಡೆಯಲು ಸಹಾಯವಾಗುತ್ತದೆ ಮತ್ತು ಉತ್ತಮ ಇಳುವರಿಯನ್ನು ಪಡೆಯಬಹುದು. |
| **ಮುಂಗಾರು ಬೆಳೆಗಳು** | ಬೆಳವಣಿಗೆ ಹಂತ ಮತ್ತು ಹೂವಿನ ಹಂತ | **ಈ ಕೆಳಗಿನ ಮಧ್ಯಮಾವಧಿ ಮತ್ತು ಕಡಿಮೆ ಅವಧಿ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ**<br>ತಡವಾದ ಮುಂಗಾರು ಬೆಳೆಗಳಾದ ರಾಗಿ: ಕೆ.ಎಮ್,ಆರ್–301, ಇಂಡಾಫ್ 5,7 ಮತ್ತು 9, ಹಾಗು ಎಂ.ಎಲ್–365 ರಾಗಿ ತಳಿಗಳನ್ನು ಬಿತ್ತನೆ ಮಾಡಬಹುದು<br>➢ ಅಲಸಂದೆ : ಟಿ.ವಿ.ಎಕ್ಸ್–944, ಕೆ.ಬಿ.ಸಿ–1, ಅವರೆ–ಎಚ್.ಎ–3 ಮತ್ತು 4,ಸೂರ್ಯಕಾಂತಿ: ಕೆ.ಬಿ.ಎಸ್.ಹೆಚ್–1,41,42,44 ಮತ್ತು 53, ಹುರುಳಿ: ಪಿ.ಎಚ್.ಜಿ–9 ಮತ್ತು ಕೆ.ಬಿ.ಎಚ್–1,<br>➢ ತೊಗರಿ ಬೆಳೆಯಲ್ಲಿ ಸಾಲುಗಳ ಮಧ್ಯದಲ್ಲಿರುವ ಮಣ್ಣನ್ನು ಗಿಡದ ಬುಡಕ್ಕೆ ಹಾಕುವುದರಿಂದ ಭೂಮಿಯು ದಿಂಡು ಸಾಲಾಗಿ ಪರಿವರ್ತನೆಯಾಗುತ್ತದೆ ಇದರಿಂದ ಗಿಡಗಳಿಗೆ ಹೆಚ್ಚು ಸಿಗುವಂತಾಗಿ ಒಣಹವೆಯ ಅನಾನುಕೂಲತೆಯನ್ನು ಮುಂದೂಡಬಹುದು. |
| **ತೋಟಗಾರಿಕೆ ಬೆಳೆಗಳು** | | |
| ಮಾವು | | 1. ಉತ್ತಮ ಮಳೆಯ ಅವಕಾಶವಿರುವುದರಿಂದ ಮಾವಿನ ತೋಪುಗಳಲ್ಲಿ ಆಳವಾದ ಉಳುಮೆ ಮಾಡಿ<br>2. ದ್ವಿದಳ ದಾನ್ಯಗಳನ್ನು ಬಿತ್ತನೆ ಮಾಡಿ ಒಂದುವರೆ ತಿಂಗಳ ನಂತರ ಭೂಮಿಗೆ ಸೇರಿಸುವುದರಿಂದ ಉತ್ತಮ ಗೊಬ್ಬರ ಮಾವಿನ ಮರಗಳಿಗೆ ಸಿಗುತ್ತದೆ ಮತ್ತು ಮುಂದಿನ ಬಾರಿ ಉತ್ತಮ ಪಸಲು ನಿರೀಕ್ಷಿಸಬಹುದು . |
| **ಪಶುಸಂಗೋಪನೆ** | | ➢ **ನೆರಡಿ ರೋಗ:** ಜ್ವರ, ಕೆಲವೊಮ್ಮೆ ಇದ್ದಕ್ಕಿದ್ದ ಹಾಗೆ ದನಗಳು ಸಾಯುವುದು, ಮೇವು ಬಿಡುವುದು, ಹೆಚ್ಚು ನಾಡಿ ಬಡಿತ, ಉಸಿರಾಟ, ಸಾವಿನ ಸಮಯದಲ್ಲಿ ಮೂಗು, ಬಾಯಿ ಮತ್ತು ಗುದದ್ವಾರದಿಂದ ರಕ್ತಸ್ರಾವವಾಗುತ್ತದೆ. ಇದರ ಹತೋಟಿಗೆ ಲಸಿಕೆಯನ್ನು ಕೊಡಿಸಿ ತಡೆಗಟ್ಟಬಹುದು.<br>➢ ಬಿಸಿಲು, ಮಳೆ ಮತ್ತು ಬೀಸುವ ಗಾಳಿಯನ್ನು ತಪ್ಪಿಸಲು ಕೋಳಿ ಮನೆಯನ್ನು ಪೂರ್ವ–ಪಶ್ಚಿಮಕ್ಕೆ ಉದ್ದುದ್ದವಾಗಿ ಆಯಾಕಾರವಾಗಿ ಕಟ್ಟುವುದು ಸೂಕ್ತ.<br>➢ ಸೂಕ್ತವಾದ ಹವಾಮಾನ ಮತ್ತು ಯತೇಚ್ಚ ಮೇವು ಸಿಗುವುದರಿಂದ ಹೈನುಗಾರಿಕೆ, ಹಂದಿ ಸಾಕಾಣಿಕೆ, ಕುರಿ ಮತ್ತು ಮೇಕೆ ಸಾಕಾಣಿಕೆಗೆ ಅನುವು ಮಾಡಿಕೊಡುತ್ತದೆ.<br>➢ ಹೈನುಗಾರಿಕೆಯಲ್ಲಿ ರೋಗಗಳ ನಿಯಂತ್ರಣಕ್ಕೆ ಪ್ರತಿ ವರ್ಷ ಲಸಿಕೆಯನ್ನು ಮಾಡಿಸುವುದು ಉತ್ತಮ.<br>➢ ಹಿಂಡಿ ಬೂಸವನ್ನು ಮೂರು–ನಾಲ್ಕು ಭಾಗ ಮಾಡಿ ಹಗಲಿನಲ್ಲಿ ಸಂಜೆ ಮತ್ತು ರಾತ್ರಿಯಲ್ಲಿ ತಿನ್ನಿಸುವುದು ಉತ್ತಮ.<br>➢ ಹೆಚ್ಚು ಕರಾವು ಕೊಡುವ ರಾಸುಗಳ ಆಹಾರದಲ್ಲಿ ಕನಿಷ್ಠ ಶೇ. 17 ರಷ್ಟು ನಾರಿನ ಅಂಶವಿರಬೇಕು ( ಎನ್.ಡಿ.ಎಫ್. ಶೇ.22 ರಷ್ಟಿರಬೇಕು.) |

**ನೋಡಲ್ ಅಧಿಕಾರಿ:**
ಕೃಷಿ ಹವಾಮಾನ ವಿಭಾಗ
**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**

**ಮೊಬೈಲ್ ಆಪ್:**

- ➢ ರೈತರು “ದಾಮಿನಿ” ಎಂಬ ತಂತ್ರಾಂಶವನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ ಲೋಡ್ ಮಾಡಿಕೊಂಡರೆ ಇದರಿಂದ ಮಿಂಚಿನ ಮನ್ಸೂಚನೆಯನ್ನು ಅತ್ಯಂತ ನಿಖರವಾಗಿ ತಿಳಿಯಬಹುದು.
- ➢ ಹಾಗೆಯೇ “ಮೌಸಮ್” ಮತ್ತು “ಮೇಘದೂತ್” ತಂತ್ರಾಂಶಗಳಿಂದ ಮಳೆಯ ಮುನ್ಸೂಚನೆ ಮತ್ತು ಕೃಷಿ ಸಲಹೆಗಳನ್ನು ಪಡೆಯಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗೆ *mausam.imd.gov.in* ಜಾಲತಾಣದಲ್ಲಿ ಮಾಹಿತಿ ಪಡೆಯಿರಿ.